ಕನಕಪುರ, ಫೆಬ್ರವರಿ 4.

ವಿಶ್ವವನ್ನು ಕಾಡುತ್ತಿರುವ ಮಾರಕ ರೋಗಗಳಲ್ಲಿ ಒಂದಾದ ಕ್ಯಾನ್ಸರ್ ರೋಗವನ್ನು ನಿಯಂತ್ರಿಸಲು ಜನಜಾಗೃತಿ, ಆತ್ಮಸ್ಥೈರ್ಯ ಹಾಗೂ ಜೀವನಶೈಲಿಗಳಲ್ಲಿ ಮಾರ್ಪಾಟು ಅತ್ಯಗತ್ಯವಾಗಿದೆ, ಎಂದು ಬೆಂ.ಗ್ರಾ. ಲೋಕಸಭಾಕ್ಷೇತ್ರದ ಸಂಸದ ಡಿ.ಕೆ.ಸುರೇಶ್ ಹೇಳಿದ್ದಾರೆ.

ಅವರು ಕನಕಪುರದ ರೂರಲ್ ಕಾಲೇಜು ಮೈದಾನದಲ್ಲಿ ಡಿಕೆಎಸ್ ಚಾರಿಟಬಲ್ ಟ್ರಸ್ಟ್, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಹಾಗೂ ವಾಟ್ಟಿಕುಟಿ ಇಂಡಿಯಾ ಫೌಂಡೇಷನ್ ಬೆಂಗಳೂರು ಸಂಯುಕ್ತವಾಗಿ ಆಯೋಜಿಸಿದ್ದ " ವಿಶ್ವ ಕ್ಯಾನ್ಸರ್ ದಿನಾಚರಣೆ ಜನಜಾಗೃತಿ ಜಾಥಾ, ಹಾಗೂ ವಿಚಾರ ಸಂಕಿರಣ " ದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕ್ಯಾನ್ಸರ್ ಗುಣಪಡಿಸಲಾಗದ ಸಾವುತರುವ ಮಾರಕ ರೋಗ ಎಂಬ ಮನೋಭಾವ ವನ್ನು ಜನರು ತೊರೆಯಬೇಕು, ಸೂಕ್ತ ಸಮಯದಲ್ಲಿ ಸಮರ್ಪಕ ಚಿಕಿತ್ಸೆ ದೊರೆತರೆ ಆರೋಗ್ಯಕರ ಜೀವನ ಸಾಧ್ಯ, ಜಂಕ್ ಫುಡ್ ತೊರೆದು ಸಾವಯವ ಪದಾರ್ಥಗಳನ್ನು ಹಾಗೂ ಸಿರಿಧಾನ್ಯಗಳನ್ನು ಬಳಸುವುದರಿಂದ ಕ್ಯಾನ್ಸರ್ ರೋಗ ನಿಯಂತ್ರಣ ಸಾಧ್ಯ, ತಂಬಾಕು ಬಳಕೆ ತಪ್ಪಿಸಿ ಮಾನಸಿಕ ಒತ್ತಡ ನಿಯಂತ್ರಿಸಿಕೊಳ್ಳುವುದರಿಂದ ಮಾರಕ ರೋಗಗಳು ಬಾರದಂತೆ ತಡೆಗಟ್ಟಬಹುದು, ಎಂದು ಸಂಸದ ಡಿ.ಕೆ.ಸುರೇಶ್ ನುಡಿದರು.

ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದ ವಿಧಾನ ಪರಿಷತ್ ಸದಸ್ಯ ಎಸ್. ರವಿ ಮಾತನಾಡಿ, ಕ್ಯಾನ್ಸರ್ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆಯನ್ನು ನಿವಾರಿಸಲು ಜನಜಾಗೃತಿ ಅಗತ್ಯ ಹಾಗೂ ಮಾಧ್ಯಮಗಳು ಜನರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಸಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಬಿ. ಲಿಂಗೇಗೌಡ ಮಾತನಾಡಿ ಸಂಸ್ಥೆಯ ವತಿಯಿಂದ ಎರಡೂವರೆ ಕೋಟಿ ವೆಚ್ಚದಲ್ಲಿ ಸಂಚಾರಿ ಕ್ಯಾನ್ಸರ್ ತಪಾಸಣಾ ವಾಹನ ವ್ಯವಸ್ಥೆ ಮಾಡಲಾಗಿದ್ದು ಕನಕಪುರ ಹಾಗೂ ರಾಮನಗರ ಜಿಲ್ಲೆಯಾದ್ಯಂತ ಜನರ ತಪಾಸಣೆ ನಡೆಸಿ ಚಿಕಿತ್ಸೆ ಒದಗಿಸಲಿದೆ, ಮಾನ್ಯ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ಡಿ.ಕೆ.ಸುರೇಶ್ ಸಹಕಾರ ನೀಡಲು ಒಪ್ಪಿದ್ದಾರೆ, ಎಂದು ಹೇಳಿದರು.

ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ವಾಕಥಾನ್, ಸೈಕಲ್ ರ್‍ಯಾಲಿ, ಜಾನಪದ ಕಲಾಮೇಳಗಳ ಮೆರವಣಿಗೆ ಕನಕಪುರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಕ್ಯಾನ್ಸರ್ ರೋಗಿಗಳ ಪರಿಮಾಣ ಮತ್ತು ಅದರ ಪರಿಣಾಮ ಕುರಿತು ಡಾ.ಸಿ.ರಮೇಶ್, ಕ್ಯಾನ್ಸರ್ ತಡೆಗಟ್ಟುವಲ್ಲಿ ಸಾವಯವ ಕೃಷಿಯ ಪ್ರಾಮುಖ್ಯತೆ ಬಗ್ಗೆ ಜೀವಭೂಮಿ ಸಂಸ್ಥೆಯ ಶ್ರೀವತ್ಸ, ಸಹಜ ಕೃಷಿಯ ಪ್ರಾಮುಖ್ಯತೆ ಬಗ್ಗೆ ಡಾ.ಕೈಲಾಸಮೂರ್ತಿ, ದೇಸಿಹಸುಗಳು ಹಾಗೂ ಉತ್ಪನ್ನಗಳ ಪಾತ್ರ ದ ಬಗ್ಗೆ ಗೋವಿಜ್ಞಾನ ಅನುಸಂಧಾನ ಪರಿಷತ್ತಿನ ವಿಜಯಸಾರಥಿ, ಪಾರಂಪರಿಕ ಆಹಾರ ಪದ್ದತಿ ಬಗ್ಗೆ ಸರ್ಕಾರಿ ಆಯುರ್ವೇದ ಕಾಲೇಜಿನ ಡಾ.ಸತ್ಯನಾರಾಯಣ ಭಟ್, ಆಯುರ್ವೇದ ಪದ್ದತಿಯಿಂದ ಕ್ಯಾನ್ಸರ್ ತಡೆ ಕುರಿತು ಡಾ.ಪ್ರೇಮಕುಮಾರಿ, ಜೀವನ ಶೈಲಿ ಬದಲಾವಣೆ ಬಗ್ಗೆ ಡಾ. ಕುಮಾರಸ್ವಾಮಿ, ಗೋವುಪರಿಕರಗಳ ಪಾತ್ರ ಕುರಿತಂತೆ ಎಸ್.ಲಕ್ಷೀನಾರಾಯಣ ರವರು ಸೋದಾಹರಣ ಉಪನ್ಯಾಸಗಳನ್ನು ನೀಡಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ರೋಟರಿ ಟ್ರಸ್ಟ್ ಅಧ್ಯಕ್ಷ ಎಂ.ಡಿ.ವಿಜಯದೇವ್, ಜಿ.ಪಂ.ಸದಸ್ಯ ಆಲಹಳ್ಳಿ ಶಿವಕುಮಾರ್, ಬಸಪ್ಪ, ವಾಟ್ಟಿಕುಟಿ ಸಂಸ್ಥೆಯ ನಿರ್ದೇಶಕ ಏರ್ ಮಾರ್ಷಲ್ ಜೋಸೆಫ್ ನೇರಿ, ಕಾರ್ಯಕ್ರಮ ಸಂಯೋಜನಾಧಿಕಾರಿ ವಿಕಾಸ್ ಕಟ್ಟೋಚ್, ಆರ್‌ಇಎಸ್ ಅಧ್ಯಕ್ಷ ಮಾನಸ ನಾಗರಾಜು, ಕಾರ್ಯದರ್ಶಿ ಸಿ.ರಮೇಶ್, ಕನಕಪುರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಎಸ್.ಎಸ್.ಶಂಕರ್, ಡಾ.ಯು.ಸಿ.ಕುಮಾರ್, ಕಾರ್ಯಕ್ರಮ ನಿರ್ವಾಹಕರಾದ ಟಿ.ವೆಂಕಟೇಶ್, ಡಾ.ಎ.ಸತ್ಯನಾರಾಯಣ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಾವೇರಿ, ಪ್ರಾಂಶುಪಾಲರಾದ ಆಂಜನಪ್ಪ, ಅರ್ಜುನಪುರಿ ರಾಜಣ್ಣ, ಕಲ್ಪನಾ ಸತ್ಯನಾರಾಯಣ, ಡಿಕೆಎಸ್ ಟ್ರಸ್ಟ್ ನಿರ್ದೇಶಕ ವಿಶ್ವನಾಥ್ ಪಾಲ್ಗೊಂಡಿದ್ದರು. ಕಿದ್ವಾಯಿ ನಿರ್ದೇಶಕ ಡಾ.ಕೆ.ಬಿ.ಲಿಂಗೇಗೌಡ ಸ್ವಾಗತಿಸಿದರು. ಕು.ಮಧುಶ್ರೀ ಕಾರ್ಯಕ್ರಮ ನಿರೂಪಿಸಿದರು. ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಸಿದ್ಧಲಿಂಗಸ್ವಾಮಿ ವಂದಿಸಿದರು.

4 ಕೆಕೆಪಿ : ಡಿಕೆಎಸ್ ಚಾರಿಟಬಲ್ ಟ್ರಸ್ಟ್, ವಾಟ್ಟಿಕುಟಿ ಫೌಂಡೇಷನ್ ಹಾಗೂ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಸಹಯೋಗದಲ್ಲಿ ನಡೆದ " ವಿಶ್ವ ಕ್ಯಾನ್ಸರ್ ದಿನಾಚರಣೆ ಜನ ಜಾಗೃತಿ ಜಾಥಾ, ಹಾಗೂ ವಿಚಾರಸಂಕಿರಣ "ದಲ್ಲಿ ಸಂಸದ ಡಿಕೆ ಸುರೇಶ್, ವಿಜಯದೇವ್, ಜಿಪಂ ಸದಸ್ಯ ಶಿವಕುಮಾರ್,ಬಸಪ್ಪ,ಡಾ.ಲಿಂಗೇಗೌಡ ಪಾಲ್ಗೊಂಡಿದ್ದರು.